ಸಲ್ಲದ ವಿಚಿತ್ರ ಹೊಸ್ತಿಲಿನ ಮೇಲಿರುವಂತೆ ಭಾಸವಾಗುತ್ತಿತ್ತು. ಹಳ್ಳಿಯಲ್ಲಿನ ಹೊಲದ ಕೆಲಸವನ್ನೇ ಮುಂದುವರೆಸೋಣವೆಂದರೆ, ಅದೇಕೋ ತಾನಾಗಿ ದುಡಿದು ಸಂಪಾದಿಸದ ಈ ಹೊಲ ತನ್ನದಲ್ಲ ಎನ್ನುವ ಭಾವನೆ ಅವನನ್ನು ಕಾಡುತ್ತಿತ್ತು. ಇಲ್ಲೇನೇ ಮಾಡಿದರೂ ಅದು ಕ್ಷಣಿಕ, ಈ ಕ್ಷಣವನ್ನು ಕಳೆಯುವ ನೆವ ಅಂತೆಲ್ಲ ಅವನಿಗೆ ಅನ್ನಿಸಿ, ಮಾಡುತ್ತಿರುವ ಕೆಲಸದ ಮೇಲಿಂದ ಮನಸ್ಸು ಹಾರಿ ಬಿಡುತ್ತಿತ್ತು. ಹಾಗಂತ ಬೆಂಗಳೂರಿಗೆ ಹೋಗೋಣವೆಂದರೆ ಅದಕ್ಕೂ ಮನಸ್ಸು ಒಪ್ಪುತ್ತಿರಲಿಲ್ಲ. ಮೂರು ವರ್ಷಗಳ ಕೆಳಗೆ ಅವನು ಬಿಟ್ಟು ಬಂದಿದ್ದ ಆ ಶಹರವಾಗಲೇ ಈಗ ಸಾಕಷ್ಟು ಮುಂದಕ್ಕೆ ಹೋಗಿತ್ತು. ಅಲ್ಲಿ ಆಗ ಅವನ ಸಹೋದ್ಯೋಗಿಗಳಾಗಿದ್ದವರೆಲ್ಲ ಈಗ ಮದುವೆಯಾಗಿ, ಟೂ ಬೀಎಚ್ಕೆ ಮನೆ-ಫ್ಲಾಟು ಮಾಡಿ, ಅವನಿಗೆ ಸಂಬಂಧವೇ ಪಡದ ಬೇರೆಯದೇ ಲೋಕದ ಭಾಗಗಳಾಗಿ ಹೋಗಿದ್ದರು. ಆಗ ಸಣ್ಣ ಹುದ್ದೆಗಳಲ್ಲಿದ್ದ ಅವರೆಲ್ಲ ಈಗ ಟೀಮ್ ಲೀಡ್‌ಗಳೂ, ಮ್ಯಾನೇಜರ್‌ಗಳೂ ಆಗಿ, ಅವನ ಬದುಕು ಎಷ್ಟು ಹಿಂದೆ ಉಳಿದಿದೆ ಎಂಬುದನ್ನು ಸೂಚಿಸುವ ಮೈಲಿಗಲ್ಲುಗಳಂತೆ ಬಹಳ ಮುಂದೆ ನಿಂತಿದ್ದರು. ಆಗೊಮ್ಮೆ ಈಗೊಮ್ಮೆ ಶಹರಕ್ಕೆ ಹೋದಾಗೆಲ್ಲಾ ಮುನೀರ ತಾನು ಈ ಹಿಂದೆ ರೂಮು ಮಾಡಿದ್ದ ಏರಿಯಾಗಳಿಗೆ, ಓಡಾಡಿದ್ದ ಬೀದಿಗಳಿಗೆ ಹೋಗುತ್ತಿದ್ದ. ಎಷ್ಟೋ ದಿನಗಳ ಕೆಳಗೆ ತನ್ನ ಬದುಕು ಸ್ಥಗಿತವಾದ ಬಿಂದುವನ್ನು ಹುಡುಕಲೆಂಬಂತೆ ಅಲ್ಲೆಲ್ಲಾ ಅಲೆದಾಡುತ್ತಿದ್ದ. ಮೂರು ವರ್ಷಗಳ ಕೆಳಗೆ ತಾನು ತೊರೆದು ಬಂದ ಜೀವನ ಇನ್ನೆಂದೂ ಬೀಳಬಾರದ ದುಃಸ್ವಪ್ನದಂತೆ ಅವನಿಗೆ ಭಾಸವಾಗುತ್ತಿತ್ತು. ಹೊರಜಗತ್ತಿನೊಡನೆ ಸಂಬಂಧವೇ ಇಲ್ಲದಂತೆ ಕಿಟಕಿಯೂ ಮುಚ್ಚಿದ ಎ.ಸಿ ಕೋಣೆಯೊಳಗೆ ಕುಳಿತು ಕಂಪ್ಯೂಟರಿನೊಡನೆ ಹುಸಿ ಪ್ರೇಮದ ಸಂಬಂಧ ಬೆಳೆಸುವುದು, ವರ್ಷಕ್ಕೊಮ್ಮೆ ಬರುವ ಸಂಬಳದ ಹೈಕನ್ನೇ ಇಡೀ ವರ್ಷ ಧ್ಯಾನ ಮಾಡುವುದು ಮುನೀರನದು, ಮೆಂಬರ್‌ನಿಂದ ಟೀಮ್ ಲೀಡ್, ಟೀಮ್ ಲೀಡ್ ನಿಂದ ಮ್ಯಾನೇಜರ್... ಹೀಗೆ ಹುದ್ದೆಯಿಂದ ಹುದ್ದೆಗೆ, ಕುರ್ಚಿಯಿಂದ ಕುರ್ಚಿಗೆ ದಾಟುವುದೇ ಜೀವನದ ಪರಮೋಚ್ಛ ಗುರಿ ಎಂಬಂತೆ ಬದುಕುವುದು, ಹೊರಗೆಲ್ಲೋ ಕುಳಿತು ಹಾಡುತ್ತಿರುವ ಹಕ್ಕಿಗೂ ತನಗೂ ಸಂಬಂಧವೇ ಇಲ್ಲ, ಎದುರಿಗೆ ಅರಳುತ್ತಿರುವ ಹೂವು ತನ್ನ ಲೋಕದ್ದೇ ಅಲ್ಲ ಎಂಬಂತೆ ಕಂಪ್ಯೂಟರ್, ಸಾಫ್ಟ್‌ವೇರ್, ದುಡಿಮೆಗಳನ್ನೊಳಗೊಂಡಂತೆ ಸಣ್ಣ ಚೌಕಟ್ಟು ಹಾಕಿಕೊಂಡು ಅದರೊಳಗೇ ಉಳಿದುಹೋಗುವುದು... ಇದೆಲ್ಲ ಮತ್ತೆ ಎಂದಿಗಾದರೂ ತನ್ನಿಂದ ಸಾಧ್ಯವಾದೀತೇ? ಎನ್ನಿಸುತ್ತಿತ್ತು.

ಹೀಗೆ ಇರುವುದನ್ನೂ ಒಪ್ಪದ, ಬಿಟ್ಟು ಬಂದಿರುವುದನ್ನೂ ಮರಳಿ ಅಪ್ಪದ ತನ್ನ ಮನಸ್ಥಿತಿ ತನಗೇ ಅರ್ಥವಾಗದೆ ನರಳುತ್ತಿದ್ದ ಮುನೀರ. ಅವನೀಗ ಯಾವ ಮಹಡಿಗೂ ಹೋಗಲಿಚ್ಛಿಸದ ಲಿಫ್ಟಿನಲ್ಲಿ ಸುಮ್ಮನೆ ಕುಳಿತು ಮೇಲಿಂದ ಕೆಳಗೆ, ಕೆಳಗಿಂದ ಮೇಲೆ ಸುತ್ತುತ್ತಾ ಕಾಲ ಕಳೆಯುವ ಪುಟ್ಟ ಹುಡುಗನಂತಾಗಿದ್ದ. ಅಮ್ಮನಾದರೂ ಅಪ್ಪ ತೀರಿಹೋದ ಮೇಲೆ ಬೇರೆಯದೇ ಆತ್ಮವನ್ನು ಧರಿಸಿಕೊಂಡವಳಂತೆ ಬದಲಾಗಿದ್ದಳು.

